03.09.2015 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ.

ಪ್ರಥಮ ವರ್ತಮಾನ ವರದಿ ನಕಲು ನಿಪಿ1, ದೋಷಾರೋಪಣಾ ಪಟ್ಟಿ ನಕಲು ನಿಪಿ2, ವಾಹನ ತಪಾಸಣಾ ವರದಿ ನಿಪಿ3, ಗಾಯದ ಪ್ರಮಾಣ ಪತ್ರ ನಿಪಿ4, ಪಂಚನಾಮೆ ನಿಪಿ5, 59 ಮೆಡಿಕಲ್ ಬಿಲ್ಲುಗಳನ್ನು ನಿಪಿ6, 34 ವೈದ್ಯಕೀಯ ಸಲಹಾ ಚೀಟಿ ನಿಪಿ7 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಸಿಕೆಎಂ ಆರ್ 2 ಪರ ವಕೀಲರಿಂದಃ-

ಆ ದಿನ ನಾನು ಗಾಡಿ ಓಡಿಸುತ್ತಿದ್ದೆ. ನಾನು ಚನಪಟ್ಟಣದಿಂದ ಮಿನಿಕೆರೆ ದೊಡ್ಡಿಗೆ ಹೋಗುತ್ತಿದ್ದೆ. ನನಗೆ ಹಿಂದುಗಡೆಯಿಂದ ಮೋಟಾರು ಸೈಕಲ್ ಬಂದು ಹೊಡೆದಿದೆ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಈಗ ವ್ಯವಸಾಯ ಮಾಡುತ್ತಿಲ್ಲ. ನಾನು ವ್ಯವಸಾಯ ಮಾಡಿ ತಿಂಗಳಿಗೆ 20 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಒಟ್ಟು ಕುಟುಂಬದಲ್ಲಿ ವ್ಯವಸಾಯ ಮಾಡುತ್ತಿದ್ದೆ. ನನ್ನ ಮಕ್ಕಳು ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿ. ನನ್ನ ಮಗ ದೂರು ನೀಡಿದ್ದಾರೆ. ಮಾರನೆ ದಿವಸ ದೂರು ನೀಡಿದ್ದೇನೆ. ನನ್ನ ಬಳಿ ಡಿಎಲ್ ಇದೆ. ಅದು ಕಳೆದು ಹೋಗಿದೆ. ನನ್ನ ಕೈ ಭುಜಕ್ಕೆ ಪೆಟ್ಟಾಗಿದೆ. ನನ್ನ ಶಸ್ತ್ರ ಚಿಕಿತ್ಸೆ ಅಗಿಲ್ಲ. ನಾನು ಚಿಕಿತ್ಸೆಗೆ 5 ಲಕ್ಷ ರೂ ಖರ್ಚು ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ 58 ವರ್ಷ ವಯಸ್ಸಾಗಿದೆ ಎಂದರೆ ಸರಿಯಲ್ಲ.

ನಾನು ಮೊದಲಿನಂತೆ ಆರೋಗ್ಯವಾಗಿದ್ದೇನೆಂದರೆ ಸರಿಯಲ್ಲ. ಹಿಂದಿನಿಂದ ಬಂದ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯರೊಂದಿಗೆ, ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ಕೇಸು ಹಾಕಿದ್ದೇನೆಂದರೆ ಸರಿಯಲ್ಲ. ನಾನು ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)*

ಓ ಹೇ ಕೇ ಸ ಓ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ
ಚನ್ನಪಟ್ಟಣ